# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 176/2015 ಸಿಡಬ್ಲೂ: 7 ಪಿಡಬ್ಲೂ: 7

ಪ್ರಮಾಣವಚನ ಬೋಧಿಸಲಾಯಿತು ದಿಃ 21-02-2025

ಹೆಸರು : ಭೀಮಾ ಶಂಕರ

ತಂದೆ ಹೆಸರು : ಗುರುಲಿಂಗಪ್ಪ

ವಯಸ್ಸು : 43 ವರ್ಷ

ಉದ್ಯೋಗ : ಪಿ ಎಸ್, ಆರ್ ಡಿ ಪಿ ಆರ್ ಬೆಂಗಳೂರು

ವಾಸಸ್ಥಳ : ಬೆಂಗಳೂರು

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನಾನು ದಿ.05-03-2014 ರಿಂದ 12-07-2017 ರ ವರೆಗೆ ಸಹಾಯಕ ಆಯುಕ್ತರು ಸೇಡಂ ಅಂತಾ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ಈ ಅವಧಿಯಲ್ಲಿ ದಿ. 02-07-2014 ರಂದು ರಾತ್ರಿ 10-00 ಗಂಟೆ ಸುಮಾರಿಗೆ ಚಾಸಾ 1 ಮತ್ತು 8 ರವರು ಚಿಂಚೊಳ್ಳಿ ರಸ್ತೆಯ ತರ್ನಳ್ಳಿ ಕ್ರಾಸ್ ಹತ್ತಿರ ಪಿ ಡಿ ಎಸ್ ಶಾಪ್ ನಂ.81 ರಲ್ಲಿ ಸದರಿ ಶಾಪ್ ನ ಡೀಲರ್ ಆದ 1 ನೇ ಆರೋಪಿತನು ಕಾಳ ಸಂತೆಯಲ್ಲಿ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದಾರೆ ಅಂತಾ ನನಗೆ ತಿಳಿಸಿರುತ್ತಾರೆ. ನಂತರ ನಾನು ಚಾ ಸಾ 1 ಮತುತ 8 ಹಾಗೂ ಮೂರು ಪಂಚರಾದ ಚಾ ಸಾ 4, 5 , 6 ರವರನ್ನು ಬರ ಮಾಡಿಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ಆಂದ್ರ ರಾಜ್ಯದ ಒಂದು ಲಾರಿ ನಂ. ಎ ಪಿ 2 ಎ 9637 ಲಾರಿ ನಿಂತಿತ್ತು. ನಂತರ ನಾವು ಸದರಿ ವಾಹನದಲ್ಲಿ ಪರೀಶಿಲನೆ ಮಾಡಿ ನೋಡಿದಾಗ ಸದರಿ ವಾಹನದಲ್ಲಿ 50 ಕೆ ಜಿ ತೂಕ ಊಳ್ಳ 148 ಅಕ್ಕಿ ತುಂಬಿದ ಚೀಲಗಳು, 50 ಕೆ ಜಿ ತೂಕ ಉಳ್ಳ 133 ಗೋಧಿ ತುಂಬಿದ ಚೀಲಗಳು, 25 ಕೆ ಜಿ ತೂಕ ಉಳ್ಳ 85 ಗೋಧಿ ತುಂಬಿದ ಚೀಲಗಳು ಇತ್ತು. ನಂತರ ನಾವು 1 ನೇ ಆರೋಪಿತನ ಶಾಪನ್ನು ತೆರೆದು ಪರಿಶೀಲಿಸಿದಾಗ ಕೆ ಎಫ್ ಸಿ ಎಸ್ ಸಿ ದಿಂದ ತಂದಿರುವ ಆಹಾರ ಧಾನ್ಯ ಇರುತ್ತದೆ. ನಂತರ ಕೆ ಎ ಫ್ ಸಿ ಎಸ್ ಸಿ ದಿಂದ ಆಹಾರ ಧಾನ್ಯ ತಂದಿರು ರಶೀದಿಯನ್ನು ನೋಡಲಾಗಿ ಅದರಲ್ಲಿ 265 ಅಕ್ಕಿ ಚೀಲಗಳು ಮತ್ತು ಮತ್ತು 50 ಕೆ ಜಿ ತೂಕ ಉಳ್ಳ 113 ಗೋಧಿ

ಚೀಲಗಳು ಸದರಿ ರಶೀದಿಯಲ್ಲಿ ನಮುವದಾಗಿತ್ತು. ಅದರ ಜೊತೆಗೆ 100 ಕೆ ಜಿ ತೂಕ ಉಳ್ಳ 7 ಸಕ್ಕರೆ ಚೀಲಗಳು ಇದ್ದವು.

ನಂತರ ನಾವು ಗೋದಾಮಿನಲ್ಲಿ ಪರಿಶೀಲನೆ ಮಾಡಿದಾಗ ಅಲ್ಲಿಗೆ 50 ಕೆ ಜಿ ತೂಕ ಉಳ್ಳ 281 ಅಕ್ಕಿ ಚೀಲಗಳು. 50 ಕೆ ಜಿ ತೂಕ ಉಳ್ಳ 68 ಗೋಧಿ ಚೀಲಗಳು ಹಾಗೂ 100 ಕೆ ಜಿ ತೂಕ ಉಳ್ಳ 7 ಸಕ್ಕರೆ ಚೀಲಗಳು ಇದ್ದವು. ಅದರಲ್ಲಿ ರಶೀದಿಕ್ಕಿಂತ 50 ಕೆ ಜಿ ತೂಕ ಉಳ್ಳ 16 ಅಕ್ಕಿ ಚೀಲಗಳು ಹಾಗೂ 45 ಗೋಧಿ ಚೀಲಗಳು ಕಡಿಮೆ ಇರುವ ಬಗ್ಗೆ ಕಂಡು ಬಂದಿರುತ್ತದೆ. 1 ನೇ ಆರೋಪಿತನು ಊರಿಗೆ ಹೋಗಿದ್ದಾರೆ ಅಂತಾ ಅಲ್ಲಿ ಉಪಸ್ದಿತ ಇರುವ 1 ನೇ ಆರೋಪಿತನ ಮಗ ತಿಳಿಸಿರುತ್ತಾರೆ ನಂತರ ಆತನಿಗೆ ವಿಚಾರಿಸಿದಾಗ ಸದರಿಯವನು ಲಾರಿಯಲ್ಲಿರುವ ಆಹಾರ ಧಾನ್ಯಗಳು ಗುರುಮಿಟ್ಕಲ್ ಗ್ರಾಮಕ್ಕೆ ಕಳುಹಿಸುತ್ತಿದ್ದೇವೆ ಎಂದು ತಿಳಿಸಿದ್ದಾನೆ. ನಂತರ ದಾಸ್ತಾನು ಪುಸ್ತಕಗಳು ಹಾಗೂ ದಾಖಲಾತಿಗಳನ್ನು ಕೇಳಿದಾಗ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಚಾ ಸಾ 10 ರಿಂದ 13 ರವರು ಗೋದಾಮಿನಲ್ಲಿ ಉಪಸ್ದಿತರಿದ್ದರು. ಸದರಿ ಲಾರಿಯಲ್ಲಿ ತುಂಬಿರುವ ಆಹಾರದ ಒಟ್ಟು ಮೌಲ್ಯ ರೂ. 6,54,000/- ಇರುತ್ತದೆ ಹಾಗೂ ಸದರಿ ಲಾರಿಯ ಮೌಲ್ಯ ರೂ. 6,00,000/- ಇರುತ್ತದೆ. ನಂತರ ಕಾನೂನು ಪ್ರಕಾರ ಸದರಿ ಲಾರಿ ಹಾಗೂ ಅದರಲ್ಲಿರುವ ಆಹಾರ ಧಾನ್ಯಗಳನ್ನು ಜಪ್ತಿಪಡಿಸಿಕೊಂಡು ಕೆ ಎಫ್ ಸಿ ಎಸ್ ಸಿ ರವರಿಗೆ ಒಪ್ಪಿಸಿರುತ್ತೇವೆ.

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೆ ನಿ ಪಿ 2 ಎಂದು ಗುರತಿಸಲಾಗಿದೆ. ಹಾಗು ಸಾಕ್ಷಿಯು ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುಡಿತಿಸಿರುವುರದರಿಂದ ಅದನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಬಿ ಎಸ್ ಎಸ್ ವಕೀಲರಿಂದ:

ನ್ಯಾಯಾಲಯದಲ್ಲಿ ಹಾಜರಿರುವ 2 ನೇ ಆರೋಪಿತನಿಗೆ ನಾನು ಇದೇ ಮೊದಲನೆ ಭಾರಿ ನೋಡುತ್ತಿದ್ದೇನೆ. ಈ ಅವಧಿಯಲ್ಲಿ ದಿ. 02-07-2014 ರಂದು ರಾತ್ರಿ 10-00 ಗಂಟೆ ಸುಮಾರಿಗೆ ಚಾಸಾ 1 ಮತ್ತು 8 ರವರು ಚಿಂಚೊಳ್ಳಿ ರಸ್ತೆಯ ತರ್ನಳ್ಳಿ ಕ್ರಾಸ್ ಹತ್ತಿರ ಪಿ ಡಿ ಎಸ್ ಶಾಪ್ ನಂ.81 ರಲ್ಲಿ ಸದರಿ ಶಾಪ್ ನ ಡೀಲರ್ ಆದ 1 ನೇ ಆರೋಪಿತನು ಕಾಳ ಸಂತೆಯಲ್ಲಿ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದಾರೆ ಅಂತಾ ನನಗೆ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾನು ಚಾ ಸಾ 1 ಮತುತ 8 ಹಾಗೂ ಮೂರು ಪಂಚರಾದ ಚಾ ಸಾ 4, 5 , 6

ರವರನ್ನು ಬರ ಮಾಡಿಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ಆಂದ್ರ ರಾಜ್ಯದ ಒಂದು ಲಾರಿ ನಂ. ಎ ಪಿ 2 ಎ 9637 ಲಾರಿ ನಿಂತಿತ್ತು. ನಂತರ ನಾವು ಸದರಿ ವಾಹನದಲ್ಲಿ ಪರೀಶಿಲನೆ ಮಾಡಿ ನೋಡಿದಾಗ ಸದರಿ ವಾಹನದಲ್ಲಿ 50 ಕೆ ಜಿ ತೂಕ ಊಳ್ಳ 148 ಅಕ್ಕಿ ತುಂಬಿದ ಚೀಲಗಳು, 50 ಕೆ ಜಿ ತೂಕ ಉಳ್ಳ 133 ಗೋಧಿ ತುಂಬಿದ ಚೀಲಗಳು, 25 ಕೆ ಜಿ ತೂಕ ಉಳ್ಳ 85 ಗೋಧಿ ತುಂಬಿದ ಚೀಲಗಳು ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾವು 1 ನೇ ಆರೋಪಿತನ ಶಾಪನ್ನು ತೆರೆದು ಪರಿಶೀಲಿಸಿದಾಗ ಕೆ ಎಫ್ ಸಿ ಎಸ್ ಸಿ ದಿಂದ ತಂದಿರುವ ಆಹಾರ ಧಾನ್ಯ ಇರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಕೆ ಎ ಫ್ ಸಿ ಎಸ್ ಸಿ ದಿಂದ ಆಹಾರ ಧಾನ್ಯ ತಂದಿರು ರಶೀದಿಯನ್ನು ನೋಡಲಾಗಿ ಅದರಲ್ಲಿ 265 ಅಕ್ಕಿ ಚೀಲಗಳು ಮತ್ತು ಮತ್ತು 50 ಕೆ ಜಿ ತೂಕ ಉಳ್ಳ 113 ಗೋಧಿ ಚೀಲಗಳು ಸದರಿ ರಶೀದಿಯಲ್ಲಿ ನಮುವದಾಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದರ ಜೊತೆಗೆ 100 ಕೆ ಜಿ ತೂಕ ಉಳ್ಳ 7 ಸಕ್ಕರೆ ಚೀಲಗಳು ಇದ್ದವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ನಂತರ ನಾವು ಗೋದಾಮಿನಲ್ಲಿ ಪರಿಶೀಲನೆ ಮಾಡಿದಾಗ ಅಲ್ಲಿಗೆ 50 ಕೆ ಜಿ ತೂಕ ಊಳ್ಳ 281 ಅಕ್ಕಿ ಚೀಲಗಳು. 50 ಕೆ ಜಿ ತೂಕ ಉಳ್ಳ 68 ಗೋಧಿ ಚೀಲಗಳು ಹಾಗೂ 100 ಕೆ ಜಿ ತೂಕ ಉಳ್ಳ 7 ಸಕ್ಕರೆ ಚೀಲಗಳು ಇದ್ದವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದರಲ್ಲಿ ರಶೀದಿಕ್ಕಿಂತ 50 ಕೆ ಜಿ ತೂಕ ಉಳ್ಳ 16 ಅಕ್ಕಿ ಚೀಲಗಳು ಹಾಗೂ 45 ಗೋಧಿ ಚೀಲಗಳು ಕಡಿಮೆ ಇರುವ ಬಗ್ಗೆ ಕಂಡು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. 1 ನೇ ಆರೋಪಿತನು ಊರಿಗೆ ಹೋಗಿದ್ದಾರೆ ಅಂತಾ ಅಲ್ಲಿ ಉಪಸ್ಥಿತ ಇರುವ 1 ನೇ ಆರೋಪಿತನ ಮಗ ತಿಳಿಸಿರುತ್ತಾರೆ ನಂತರ ಆತನಿಗೆ ವಿಚಾರಿಸಿದಾಗ ಸದರಿಯವನು ಲಾರಿಯಲ್ಲಿರುವ ಆಹಾರ ಧಾನ್ಯಗಳು ಗುರುಮಿಟ್ಕಲ್ ಗ್ರಾಮಕ್ಕೆ ಕಳುಹಿಸುತ್ತಿದ್ದೇವೆ ಎಂದು ತಿಳಿಸಿದ್ದಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ದಾಸ್ತಾನು ಪುಸ್ತಕಗಳು ಹಾಗೂ ದಾಖಲಾತಿಗಳನ್ನು ಕೇಳಿದಾಗ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಚಾ ಸಾ 10 ರಿಂದ 13 ರವರು ಗೋದಾಮಿನಲ್ಲಿ ಉಪಸ್ಥಿತರಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಲಾರಿಯಲ್ಲಿ ತುಂಬಿರುವ ಆಹಾರದ ಒಟ್ಟು ಮೌಲ್ಯ ರೂ. 6,54,000/- ಇರುತ್ತದೆ ಹಾಗೂ ಸದರಿ ಲಾರಿಯ ಮೌಲ್ಯ ರೂ. 6,00,000/- ಇರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಕಾನೂನು ಪ್ರಕಾರ ಸದರಿ ಲಾರಿ ಹಾಗೂ ಅದರಲ್ಲಿರುವ

ಆಹಾರ ಧಾನ್ಯಗಳನ್ನು ಜಪ್ತಿಪಡಿಸಿಕೊಂಡು ಕೆ ಎಫ್ ಸಿ ಎಸ್ ಸಿ ರವರಿಗೆ ಒಪ್ಪಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**